ಬಂದೋಬಸ್ತು ಮಾಡುವುದರಲ್ಲಿ ಸರ್ಕಾರ ಯಶಸ್ವಿಯಾಗಿದೆ. ಇಂಥಾ ಘಟನಾವಳಿಗಳು ಇವತ್ತು ಬಹಳ ಕಡಿಮೆಯಾಗಿದೆ ಅನ್ನತಕಕ್ಕಂಥ ಮಾತನ್ನು ಕೇಳಿ, ಪರಿಹಾರದ ಬಗ್ಗೆ ಏನು ಹೇಳಿದ್ದಾರೆ, ನಾನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮತ್ತು ಎಸ್.ಪಿ.ಗಳಿಗೆ ಸಂದರ್ಭದಲ್ಲಿ ಮಾತನಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಅದೇ ನನಗೂ ಅರ್ಥ ಆಗುತ್ತಿಲ್ಲ, ನಿಮಗೂ ಅರ್ಥ ಆಗುತ್ತಿಲ್ಲ. ಅವರೂ ಹಾಗೇ ಇದ್ದಾರೆ. ಈಗ ಜೀರೋ ಅವರ್‌ನಲ್ಲಿ ಮೆನ್‌ಷನ್ ಮಾಡಿದ್ದಾರೆ. ನೀವು ಎಲಾಬೊರೇಟ್ ಆನ್ಸರ್ ಕೊಡುತ್ತಿದ್ದೀರಿ. you should just sum up in brief. ಅಮೇಲೆ ಬೇಕಾದರೆ ಸೆಪರೇಟಾಗಿ ರೈಸ್ ಮಾಡುವುದಕ್ಕೆ ಅವಕಾಶ ಇದೆ. ನಾನು ಈಗ ಜೀರೋ ಅವರ್ ಡೆಫೆನಿಷನ್ ರಿವೈಸ್ ಮಾಡಬೇಕು. ಜೀರೋ ಅವರ್ಸ್ ಮಾಡಿಕೊಂಡಿದ್ದೀರಿ ನೀವು. I have to regulate. You should use your wisdom.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ನನಗೆ ಏನೂ ಆ ತರಹ ಇಲ್ಲ. I would like to submit humbly before your kindself the facts. ಈಗ ಸರ್ಕಾರದ ಮೇಲೆ ಆರ್ ಎ ಎಫ್ ತರಿಸಲಿಲ್ಲ ಎಂದು ಹೇಳಿದ್ದಾರೆ. ಎಸ್.ಪಿ.ಅವರು ಬಂದೋಬಸ್ತು ಮಾಡಲಿಲ್ಲ, ಅಲ್ಲಿ ಸಿ.ಎಮ್. ಬಂದೋಬಸ್ತ್‌ಗೆ ತುರುವೇಕೆರೆಗೆ ಹೋಗಿದ್ದು. ಅದರಿಂದ ಹಾಗೆ ಆಯಿತು ಎಂದು ಹೇಳಿದಾಗ for that reason ಇಷ್ಟೊಂದು ನಾನು ಡೀಟೈಲ್ ಆಗಿ ಸ್ಟೇಟ್‌ಮೆಂಟ್‌ಮಾಡಿದ್ದೇನೆಯೋ ಹೊರತು ಬೇರೆ ಯಾವ ಕಾರಣದಿಂದಲೂ ಅಲ್ಲ, ನೀವು ಮಾತನಾಡುವಾಗ ನಾನು ಕೇಳಿದ್ದೇನೆ. ನಾನು ಮಾತನಾಡುವಾಗ ತಾವೂ ಕೇಳಿ. ಶಿವಮೊಗ್ಗಾದಲ್ಲಿ ಆಗಿರತಕ್ಕಂಥ ಸಾವಿನ ಬಗ್ಗೆ ಪರಿಹಾರವನ್ನು ಒದಗಿಸಿ ಕೊಡುತ್ತೇನೆ. ಇದರ ಬಗ್ಗೆ ಸ್ಪಷ್ಟವಾಗಿ ನಾನು ಹೇಳುತ್ತಿದ್ದೇನೆ. ಕೊನೆಯದಾಗಿ, ಅಧ್ಯಕ್ಷರೇ, ಇವತ್ತು ಗಣಪತಿ ಪ್ರೊಸೆಷನ್ ಇರಬಹುದು, ಈದ್‌ಮಿಲಾದ್ ಪ್ರೊಸೆಷನ್ ಇರಬಹುದು, ಈ ರೀತಿಯ ಪ್ರೊಸೆಷನ್‌ಗಳ ಸಂದರ್ಭದಲ್ಲಿ ನಾವು ಅಂದರೆ ರಾಜ್ಯ ಸರ್ಕಾರ ಹದ್ದಿನ ಕಣ್ಣನ್ನು ಇಟ್ಟಿದ್ದೇವೆ. ಯಾರು ಆಂಟಿ ಸೋಷಿಯಲ್ ಎಲಿಮೆಂಟ್ಸ್ ಇದ್ದಾರೆ. ಕಮ್ಯುನಲ್ ಗೂಂಡಾಗಳು ಇದ್ದಾರೆ, ಇವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮುಂಜಾಗ್ರತೆಯಾಗಿ ಶಾಂತಿ ಸಭೆಗಳನ್ನು ಒಂದಲ್ಲ ಎರಡು ಸಾರಿ ಮಾಡುವುದರ ಕಡೆಗೆ ನಾವು ನಿಗಾವನ್ನು ಮಾಡಿದ್ದೇವೆ. ಇದರ ಜೊತೆಗೆ, ಮಾನ್ಯ ಅಧ್ಯಕ್ಷರೇ,ಇಂಥಹ ಸಂದರ್ಭಗಳಲ್ಲಿ ವಿಶೇಷವಾದ ಬಂದೋಬಸ್ತನ್ನು ಮಾಡಲಿಕ್ಕೆ ಪೋಲೀಸನಲ್ಲೇ ಒಂದು ವಿಶೇಷವಾದ ಪೋಲೀಸ್ ಪಡೆಯನ್ನು ಮಾಡಲಿಕ್ಕೂ ಸಹಿತ ಸರ್ಕಾರ ಪರಿಶೀಲನೆಯನ್ನು ಮಾಡುತ್ತಿದೆ ಎಂದು ಹೇಳಲು ಇಷ್ಟ ಪಡುತ್ತೇನೆ. ಇನ್ನು ಶಾಂತಿ ಸಮಿತಿಯ ಬಗ್ಗೆ ನಾನು ಹೇಳಿದ್ದೆ, ತಮಗೆ ಧೀರ್ಘವಾಗಿ ಹೇಳಿದ್ದೇನೆ. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಗುರುತು ಮಾಡಿರತಕ್ಕಂಥ ಸೂಕ್ಷ್ಮವಾದ ಪ್ರದೇಶಗಳಲ್ಲಿ ಎಲ್ಲಾ ಕಡೆಗಳಲ್ಲೂ ಸಹಿತ ಶಾಂತಿ ಸಭೆಗಳನ್ನು ಮುಂಜಾಗ್ರತೆಯಾಗಿ ಮಾಡುತ್ತೇವೆ. ಈ ದಿಸೆಯಲ್ಲಿ ಸದನದ ಎಲ್ಲಾ ಪಕ್ಷದ ಗಣ್ಯವ್ಯಕ್ತಿಗಳು ಸಹಕಾರವನ್ನು ಕೊಡಬೇಕು ಎಂದು ಹೇಳಿ, ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶಿಕ್ಷಕರ ನೇಮಕಾತಿ ಬಗ್ಗೆ.

ಶ್ರೀ ಬಿ. ಶಿವರಾಮು (ಗಂಡಸಿ) : ಆಯಿತು. ಸನ್ಮಾನ್ಯ ಅಧ್ಯಕ್ಷರೇ, ಈಗ ಶಿಕ್ಷಕರ ನೇಮಕಾತಿ ವಿಚಾರವಾಗಿ ಟಿ.ಸಿ.ಹೆಚ್., ಸಿ.ಪಿ.ಎಡ್. ತರಬೇತಿ ಆದವರಿಗೆ

10ನೇ ತಾರೀಖಿಗೆ ಕೊನೆಯ ದಿವಸವಾಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಕಛೇರಿಯಲ್ಲಿ ನೋಂದಣಿ ಮಾಡಬೇಕು ಎನ್ನತಕ್ಕಂಥ ಆದೇಶವನ್ನು ಸರ್ಕಾರ ಹೊರಡಿಸಿದೆ. ಇದರಲ್ಲಿ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ ಎನ್ನತಕ್ಕಂಥಾದ್ದನ್ನು ತಮ್ಮ ಮೂಲಕ ಮಂತ್ರಿಗಳ ಗಮನಕ್ಕೆ ತರಲಿಕ್ಕೆ ಇಚ್ಛೆ ಪಡುತ್ತಿದ್ದೇನೆ ಅಧ್ಯಕ್ಷರೇ. ಈ ಸಾರಿ ಟಿ.ಸಿ.ಹೆಚ್, ಸಿ.ಪಿ.ಎಡ್. ಫಲಿತಾಂಶ ಲೇಟಾಗಿ ಹೊರಗೆ ಬಂತು. ಕೆಲವು ವ್ಯತ್ಯಾಸಗಳನ್ನು ಸರಿಪಡಿಸತಕ್ಕಂಥ ವಿಚಾರದಲ್ಲಿ ಮಂಡಳಿಯ ಕಛೇರಿಯಲ್ಲಿ 6-7ನೇ ತಾರೀಖು ಸಾಧಾರಣ ಒಂದು ಸಾವಿರ ಹುಡುಗರು ಇದ್ದದ್ದು ನನ್ನ ಗಮನಕ್ಕೆ ಬಂದು. ಕಛೇರಿಗೆ ಹೋಗಿ ಮಂಡಳಿಯ ನಿರ್ದೇಶಕರ ಗಮನಕ್ಕೆ ನಾನು ತಂದಿದ್ದೇನೆ. ಈಗ ಏನಾಗಿದೆ ಎಂದರೆ ಮಾರ್ಕ್ಸ್ ಕಾರ್ಡ್‌ಗಳನ್ನು ಸರಿಪಡಿಸಿಕೊಡತಕ್ಕಂಥಾದ್ದು, ಅದನ್ನು ನೋಂದಾಯಿಸಿ ಕೊಡತಕ್ಕಂಥಾದ್ದು ಡಿಲೇ ಆಗಿರುವುದರಿಂದ ಆ ಹುಡುಗರಿಗೆ 10ನೇ ತಾರೀಖಿಗೆ ನೋಂದಣಿಯನ್ನು ಮಾಡತಕ್ಕಂಥಾದ್ದು ಆಗಿಲ್ಲ. ಎರಡನೇಯ ವಿಚಾರ ಎಂದರೆ, 8ನೇ ತಾರೀಖು, 9ನೇ ತಾರೀಖು ರಜಾ ಇತ್ತು, ಎರಡನೇ ಶನಿವಾರ ಮತ್ತು ಭಾನುವಾರ. 10ನೇ ತಾರೀಖಿಗೆ ಅವರು ನೋಂದಣಿಯ ಕೊನೆಯ ದಿವಸ ಎಂದು ಹೇಳಿದರು. 10ನೇ ತಾರೀಖು ಭಾನುವಾರ, 9ನೇ ತಾರೀಖು ರಜಾದಿನ, 8ನೇ ತಾರೀಖು ಬಂದ್. ಆದ್ದರಿಂದ, ಈ ಮೂರು ದಿವಸ ರಜಾ ಬಂದದ್ದರಿಂದ ಕಛೇರಿಯಲ್ಲಿ ಕೆಲಸ ಆಗಿಲ್ಲ. ಆ ಸಂದರ್ಭದಲ್ಲಿ ಆ ಕಛೇರಿಗೆ ಹೋದಾಗ, ನಿರ್ದೇಶಕರನ್ನು ಭೇಟಿ ಮಾಡಿದಾಗ ಅವರ ಅಸಹಾಯಕತೆಯನ್ನು ಹೇಳತಕ್ಕಂಥದನ್ನು ಮಾಡಿದ್ದಾರೆ, ಸಿಬ್ಬಂದಿ ಇಲ್ಲ ಎನ್ನತಕ್ಕಂಥಾದ್ದನ್ನು. ಅಸಿಸ್ಟೆಂಟ್ ಡೈರೆಕ್ಟರ್ ಏನಿದ್ದಾರೆ, ಅವತ್ತು ರಜೆಯಲ್ಲಿ ಇದ್ದು, ಆ ಕಛೇರಿಯೊಳಗೆ ಬಂದಂಥ ಪ್ರಸ್ತಾವನೆಗಳನ್ನು ಪರಿಶೀಲನೆ ಮಾಡದೇ ಸೈನ್ ಹಾಕದೇ ಹುಡುಗರಿಗೆ ನಿಮ್ಮ ಶಾಲೆಗಳಿಗೆ ಕಳುಹಿಸುತ್ತೇವೆ ಹೋಗಿ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ಈಗ ಕಳುಹಿಸುವುದು ಡಿಲೇ ಆಗಿರುವುದರಿಂದ ಆ ಹುಡುಗರಿಗೆ ನೋಂದಣಿ ಆಗದೇ ಇರುವುದರಿಂದ ತೊಂದರೆಯಾಗಿದೆ. ದಯವಿಟ್ಟು ಕಾಲಾವಕಾಶ ಏನು ತಾವು 10ಕ್ಕೆ ನಿಗದಿ ಮಾಡಿದ್ದೀರಿ ಅದನ್ನು ಕನಿಷ್ಟ ಒಂದು ವಾರ, 16ನೇ ತಾರೀಖಿನವರೆಗಾದರೂ ಮುಂದುವರೆಸಿ ಒಂದು ವರ್ಷಕ್ಕೆ ದೊರೆಯತಕ್ಕಂಥ ಒಂದು ಅವಕಾಶದಲ್ಲಿ ಆ ವಿದ್ಯಾರ್ಥಿಗಳಿಗೆ ತಾವು ನ್ಯಾಯವನ್ನು ಒದಗಿಸಿ ಕೊಡಬೇಕು ಎಂದು ಹೇಳಿ ಅಧ್ಯಕ್ಷರ ಮೂಲಕ ಮಂತ್ರಿಗಳನ್ನು ನಾನು ಮನವಿ ಮಾಡಿ ಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸ್ನೇಹಿತರು ಏನು ಅರ್ಜಿಗಳು ಅವರಿಗೆ ಸರಿಯಾದ ಕಾಲಕ್ಕೆ ದೊರೆಯುವುದಕ್ಕೆ ಅವಕಾಶ ಆಗಲಿಲ್ಲ ಎಂದು ಹೇಳಿ ಕೇಳುತ್ತಿದ್ದಾರೆ, ನಾವು ಈಗ ರೆಕ್ರೂಟ್‌ಮೆಂಟ್ ಮಾಡುತ್ತಿರತಕ್ಕಂಥಾದ್ದು 29 ವರ್ಷದ ಮೇಲ್ಪಟ್ಟಿರತಕ್ಕಂಥವರಿಗೆ ನಾವು 10ನೇ ತಾರೀಖಿನ ಗಡುವು ಕೊಟ್ಟಿರತಕ್ಕಂಥಾದ್ದು. 29ವರ್ಷದ ಮೇಲ್ಪಟ್ಟಿರತಕ್ಕಂಥವರು ಈ 5-6ವರ್ಷಗಳ ಹಿಂದೆ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು ಅವರವರು ಭದ್ರವಾಗಿ ಇಟ್ಟು ಕೊಂಡಿದ್ದಾರೆ. ಈಗ 18 ವರ್ಷದ ಮೇಲ್ಪಟ್ಟವರಿಗೆ, ನನ್ನ ಸ್ನೇಹಿತರು ಏನು ಹೇಳುತ್ತಿದ್ದಾರೆ ಅವರಿಗೆ ಒಂದು ವೇಳೆ ಈ ರೀತಿ ಸರ್ಟಿಫಿಕೇಟ್, ಸಿಕ್ಕಿಲ್ಲ ಎಂದರೆ ಒಪ್ಪಬಹುದಾಗಿತ್ತು. 29 ವರ್ಷಕ್ಕೆ ಮೇಲ್ಪಟ್ಟವರು 9,000 ಉಪಾಧ್ಯಾಯರುಗಳನ್ನು ನಾವು ನೇಮಕ ಮಾಡಿ ಕೊಳ್ಳುವುದರಿಂದ ಸರ್ಟಿಫಿಕೇಟುಗಳು ಹಿಂದೆಯೇ ಸಿಕ್ಕಿರುತ್ತದೆ. ಆದ್ದರಿಂದ ಅದನ್ನು ಪರಿಶೀಲನೆ ಮಾಡಿ ನೋಡುತ್ತೇನೆ. ಆ ರೀತಿಯ ಅವ್ಯವಸ್ಥೆ ಆಗುವುದಕ್ಕೆ ಕಾರಣ ಇಲ್ಲ. ನಾನು ಕೇಳಿದ ಈಗ ಅಧಿಕಾರಿಗಳನ್ನು ಎಲ್ಲಾ ಆಗಿದೆ ಅನ್ನುತ್ತಿದ್ದಾರೆ. ತಾವು ಏನು ಹೇಳುತ್ತಿದ್ದೀರಿ, 29ವರ್ಷದ ಮೇಲ್ಪಟ್ಟವರು ಆಗಿರುವುದರಿಂದ

ಅವರಿಗೆ ಎಲ್ಲಾ ಸರ್ಟಿಫಿಕೇಟುಗಳು ಅವರ ಹತ್ತಿರ ಭದ್ರವಾಗಿ ಇಟ್ಟುಕೊಂಡಿದ್ದಾರೆ. ಅವರೇ 10ನೇ ತಾರೀಖಿಗೆ ಅಪ್ಲಿಕೇಷನ್ ಹಾಕಬೇಕಾಗಿರತಕ್ಕಂಥಾದ್ದು. ಇದರ ಬಗ್ಗೆ ವಿಮರ್ಶೆ ಮಾಡಿ ನೋಡಿ ಹೇಳುತ್ತೇನೆ.

ನಿಯಮ 351ರ ಅಡಿಯಲ್ಲಿನ ಸೂಚನೆಗಳು

ಬಾದಾಮಿ ಮತ್ತು ಗುಳೇದ ಗುಡ್ಡದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಖಾಲಿ ಇರತಕ್ಕ ವೈದ್ಯಾಧಿಕಾರಿಗಳ ಹುದ್ದೆ ಭರ್ತಿ

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಗುಳೇದಗುಡ್ಡ) : ಮಾನ್ಯ ಅಧ್ಯಕ್ಷರೇ, ವಿಜಾಪುರ ಜಿಲ್ಲೆ ಬಾದಾಮಿ ತಾಲ್ಲೂಕಿನ ಬಾದಾಮಿ ಮತ್ತು ಗುಳೇದಗುಡ್ಡ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, ಇತರ ಆರೋಗ್ಯ ಕೇಂದ್ರಗಳು ಮತ್ತು ಘಟಕಗಳಿಗೆ ಮಂಜೂರಾದ ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿ ಹುದ್ದೆಗಳಿಗೆ ಇಂದಿಗೂ ಭರ್ತಿ ಮಾಡದೇ ರೋಗಿಗಳಿಗೆ ತುಂಬಾ ದೈಹಿಕ ಮತ್ತು ಮಾನಸಿಕ ತೊಂದರೆಯಾಗಿರುವುದರಿಂದ ತೊಂದರೆಯಿಂದ ಬಳಲುವ ಪರಿಸ್ಥಿತಿ ಉದ್ಭವಿಸಿದೆ. ರೋಗ ನಿಯಂತ್ರಣಕ್ಕಾಗಿ ವೈದ್ಯರ ಮತ್ತು ತಜ್ಞ ವೈದ್ಯರ ಸಲಹೆಗಾಗಿ ದೂರ ಸ್ಥಳಗಳಾದ ಬಾಗಲಕೋಟೆ, ಗದಗ್, ಹುಬ್ಬಳ್ಳಿಗೆ ಹೋಗುವ ಪರಿಸ್ಥಿತಿ ತಲೆದೋರಿದೆ. ಸಾಮಾನ್ಯ ಕೂಲಿಕಾರರು, ರೈತರು, ಶಿಕ್ಷಕರು, ಈ ಸ್ಥಳಗಳಿಗೆ ಹೋಗಿ ಶುಶ್ರೂಷೆ, ಚಿಕಿತ್ಸೆ ಪಡೆಯುವ ಶಕ್ತಿ ಇಲ್ಲವೇ ಇಲ್ಲ. ಆಸ್ಪತ್ರೆಗಳಲ್ಲಿ ಔಷಧ ಇದ್ದರೂ, ವೈದ್ಯರು ಮತ್ತು ಅವರ ಸಹಾಯಕ ಸಿಬ್ಬಂದಿ ಇರದಿರುವುದರಿಂದ ಬಳಕೆಯಾಗದೇ ಅನುಪಯುಕ್ತ ಆಗುವ ಸಂದರ್ಭ ಒದಗಿದೆ. ಆದ್ದರಿಂದ ಸರ್ಕಾರ ಆದಷ್ಟು ತೀವ್ರವೇ ಖಾಲಿ ಇರುವ ವೈದ್ಯರ ಮತ್ತು ಸಹಾಯಕ ಹುದ್ದೆಗಳನ್ನು ಭರ್ತಿ ಮಾಡುವ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರದ ತುರ್ತು ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು : ಮಂತ್ರಿಗಳು ನನ್ನ ಅನುಮತಿಯನ್ನು ಪಡೆದು ದೆಹಲಿಯಲ್ಲಿ ಆರೋಗ್ಯ ಮಂತ್ರಿಗಳ ಕಾರ್ಯಕ್ರಮದಲ್ಲಿ ಪಾಲುಗೊಳ್ಳುವುದಕ್ಕೆ ಹೋಗಿದ್ದಾರೆ. ಅವರು ಬಂದ ನಂತರ ಉತ್ತರವನ್ನು ಕೊಡುತ್ತಾರೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡ ಬಯಸುತ್ತೇನೆ.

ಸಮುದಾಯ ಆರೋಗ್ಯ ಕೇಂದ್ರ, ಬಾದಾಮಿ, ಇಲ್ಲಿ ನಾಲ್ಕು ಜನ ವೈದ್ಯರು ಕೆಲಸ ಮಾಡುತ್ತಿದ್ದಾರೆ. (ಡಾ॥ ಶ್ರೀ ಶೈಲಪ್ಪ, ಡಾ॥ ಸಾಳಗುಂದಿ, ಡಾ॥ ಕೋತಡ್ಡಿ, ಡಾ॥ ಮುಜುಂದಾರ) ಸದರಿ ಆಸ್ಪತ್ರೆಯಲ್ಲಿ ಪ್ರಯೋಗ ಶಾಲಾ ತಂತ್ರಜ್ಞ, ಫಾರ್ಮಾಸಿಸ್ಟ್ ನೇತ್ರ ಸಹಾಯಕ ಹುದ್ದೆಗಳು ಖಾಲಿಯಿರುವುದಲ್ಲದೇ ಕಿರಿಯ ಆರೋಗ್ಯ ಸಹಾಯಕ (13), ಕಿರಿಯ ಆರೋಗ್ಯ ಸಹಾಯಕಿ (5), ಪ್ರಥಮ ದರ್ಜೆ ಸಹಾಯಕ (5) ಮತ್ತು ಡಿ-ಪಂಗಡ(17) ಹುದ್ದೆಗಳು ಖಾಲಿಯಿರುತ್ತವೆ.

ಸಾರ್ವಜನಿಕ ಆಸ್ಪತ್ರೆ, ಗುಳೇದಗುಡ್ಡ ಇಲ್ಲಿ ಮೂರು ಮಂದಿ ವೈದ್ಯರು ಕೆಲಸ ಮಾಡುತ್ತಿದ್ದಾರೆ. (ಡಾ॥ ಪಟ್ಟಣ, ಡಾ॥ (ಶ್ರೀಮತಿ) ಟೆಲಸಂಗ, ಮತ್ತು ಡಾ॥ ಬ್ಯಾಕೋಡ್).

ಬಾದಾಮಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳ ಪೈಕಿ ಕೆಲವು ಸಂಸ್ಥೆಗಳಲ್ಲಿ ವೈದ್ಯರು, ಹಿರಿಯ ಆರೋಗ್ಯ ಸಹಾಯಕ, ಕಿರಿಯ ಆರೋಗ್ಯ ಸಹಾಯಕ, ಪ್ರಯೋಗ ಶಾಲಾ ತಂತ್ರಜ್ಞ ಹುದ್ದೆಗಳು ಖಾಲಿ ಇರುತ್ತವೆ.